**ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ**

**ವಿಷಯ**

1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ**

ದಿನಾಂಕ :01-06-1987 ರಿಂದ 1994-95ನೇ ಸಾಲಿನವರೆಗೆ ಪ್ರಾರಂಭಗೊಂಡು ಸತತವಾಗಿ ನಡೆಸಲಾಗುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ದಿನಾಂಕ : 06-10-2007 ಹಾಗೂ 08-09-2008ರ ಸರ್ಕಾರದ ಆದೇಶಗಳಲ್ಲಿ ಅವಕಾಶ ಕಲ್ಪಿಸಲಾಗಿತ್ತು. 1995ರ ನಂತರ ಪ್ರಾರಂಭವಾದ ಕನ್ನಡ ಮಾಧ್ಯಮ ಶಾಲೆ, ಕಾಲೇಜುಗಳಿಗೆ ಸಹಾಯಾನುದಾನ ವಿಸ್ತರಿಸಲು ಆಗ್ರಹಗಳು ಬಂದ ಹಿನ್ನೆಲೆಯಲ್ಲಿ ದಿನಾಂಕ : 14-01-2020ರಂದು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವ ವಿವಿಧ ಮಠಗಳ ಅಧ್ಯಕ್ಷರು ಮತ್ತು ಖಾಸಗಿ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಿ ಅಧ್ಯಕ್ಷರುಗಳು, ವಿಧಾನಪರಿಷತ್ ಸದಸ್ಯರು, ಖಾಸಗಿ ಶಾಲಾ ಶಿಕ್ಷಕರ ಪ್ರತಿನಿಧಿಗಳೊಡನೆ ಸಭೆ ನಡೆಸಲಾಗಿದೆ.

ದಿನಾಂಕ :14-01-2020ರಂದು ನಡೆದ ಸಭೆಯಲ್ಲಿ 1995ರ ನಂತರದಲ್ಲಿ ಪ್ರಾರಂಭವಾದ ಖಾಸಗಿ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತಂತೆ ಚರ್ಚಿಸಿ 1995 ರಿಂದ 2018ರವರೆಗೆ ಸಂಬಂಧಿಸಿದಂತೆ ಪ್ರತಿ 5 ವರ್ಷದ ಬ್ಲಾಕ್ ಅವಧಿಗೆ ಒಟ್ಟು ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳ ಸಂಖ್ಯೆಯನ್ನು ಅವುಗಳ ಹೆಸರಿನೊಂದಿಗೆ ಮತ್ತು ಒಟ್ಟು ಶಿಕ್ಷಕರುಗಳ ಸಂಖ್ಯೆಯನ್ನು ಹಾಗೂ ಅಂದಾಜು ವೆಚ್ಚದ ಮಾಹಿತಿಯನ್ನು ನೀಡಿದಲ್ಲಿ ಈ ಬೇಡಿಕೆಯ ಕುರಿತಂತೆ, ನಿರ್ಣಯಿಸಲು ಸಾಧ್ಯವಾಗುತ್ತದೆ ಎಂದು ಮನಗಂಡು, ಪ್ರತಿ 5 ವರ್ಷಕ್ಕೆ ಸೀಮಿತಗೊಳಿಸಿ ಮಾಹಿತಿಯನ್ನು ಕ್ರೋಢೀಕರಿಸಲು ನಿರ್ಧರಿಸಿದ್ದು, ಅದರಂತೆ ಕ್ರೋಢೀಕೃತ ಮಾಹಿತಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಕ್ರೋಢೀಕೃತ ಮಾಹಿತಿ ಸ್ವೀಕೃತವಾದ ಕೂಡಲೆ ಪ್ರತಿ 5 ವರ್ಷಕ್ಕೆ ಸೀಮಿತಗೊಳಿಸಿ ಆರ್ಥಿಕ ಪರಿಣಾಮಗಳ ಮಾಹಿತಿಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲಾಗುವುದು.

**ಸಂಖ್ಯೆ : ಇಡಿ 29 ಪಿಎಂಸಿ 2020**

[ಎಸ್.ಸುರೇಶ್‌ಕುಮಾರ್]
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು.**